

ಒಂದಿಪ್ಪತ್ತು ಸಾವಿರ ಲಂಚ ಸಿಗುತ್ತೆ. ಆ ಕುಂಟ ನನ್ಮಗನಿಗೆ' ಎಂದಾಗ ಅಂಗವೈಕಲ್ಯದ ಬಗ್ಗೆ ಅಪಹಾಸ್ಯವೆನಿಸಿತು.

'ನೋಡಿ ಅಕ್ಕ, ಮನುಷ್ಯ ಅಂಗವಿಕಲನಾಗಿ ಹುಟ್ಟಿದ್ದು ಅವರ ತಪ್ಪಲ್ಲ. ಅವರ ಬಗ್ಗೆ ಸಹಾನುಭೂತಿ ಇರ್ಬೇಕು. ನಿಮ್ಮ ಮಾತಿನ ರೀತಿ ಸರಿ ಇಲ್ಲ' ಎಂದ.

'ಅಯ್ಯೋ ದೇವರೆ, ಅವನು ಹುಟ್ಟಾ ಕುಂಟನಲ್ಲ. ನನ್ನ ಮಗ, ಮಗಳು ಸೇರಿ ಅವನ ಕಾಲು ಮುರಿದಿದ್ದು. ನನಗೂ ಅಂಗವಿಕಲರ ಬಗ್ಗೆ ಕನಿಕರ ಇದೆ' ಎಂದ ಮಹಿಳೆ ಮಾತೃಹೃದಯ ಹೊರಚೆಲ್ಲಿದರು.

ಮಾತುಕತೆ ಆಕ್ರೋಶದಿಂದ ಪ್ರಾರಂಭವಾಗಿ ಕೌತುಕತೆಯತ್ತ ಸಾಗುತ್ತಿರುವುದನ್ನು ಎಣಿಸುತ್ತ 'ಪಾಪ, ಕಾಲು ಮುರಿಯಬಾರದಿತ್ತು. ಅಂತಹ ತಪ್ಪು ಅವನೇನು ಮಾಡ್ದ ಅಕ್ಕ' ಎಂದಿದ್ದಕ್ಕೆ ಆ ಮಹಿಳೆ – 'ನೀವು ನನ್ನ ಅಕ್ಕ ಅಂದ್ರಿ. ನೀವು ನನ್ನ ತಮ್ಮ ಅಂತ ಸಲೀಸಾಗಿ ಹೇಳಬಹುದು. ದಿನಾ ಅವನಿಗೆ ದುಡ್ಡು ಬರುತ್ತೆ ನೋಡಿ, ಅವನಿಗೆ ಹನ್ನೆರಡು ಜನ ದೊರೆಸಾನಿಗಳು, ನೀವು ಗರ್ಲ್ ಫ್ರೆಂಡ್ಸ್ ಅಂತೀರಲ್ಲ, ಅವರು ಇದ್ದಾರೆ' ಎಂದಾಗ ಮಾತು ತುಂಡರಿಸಿ, 'ಕಾಲು ಮುರ್ಕೊಂಡಿರುವ ಮನುಷ್ಯ ಹೇಗೆ ಹನ್ನೆರಡು ಜನ ಗರ್ಲ್ ಫ್ರೆಂಡ್ಸ್ ಮೆಂಟೇನ್ ಮಾಡ್ತಾನೆ!' ಎಂದು ತುಟಿಯಂಚಿನ ನಗೆಯೊಂದಿಗೆ ಹಾಸ್ಯ ಚಟಾಕಿ ಹಾರಿಸಿದ ಚಿದಂಬರ.

'ಒಂದ್ಸಾರಿ ಅವನನ್ನು ಕರೆದು ಮಾತಾಡಿ. ಆಗ ನಿಮ್ಗೆ ಗೊತ್ತಾಗುತ್ತೆ. ಅವನು ಎಷ್ಟು ಛತ್ರಿ, ಕಾಲ್ ಮುರಿದ್ರೆ ಸರಿ ಹೋಗ್ತಾನೆ ಅಂದುಕೊಂಡ್ರೆ, ಅವನ ಆಟ ಜಾಸ್ತಿಯಾಗಿದೆ ಸ್ವಾಮಿ' ಎಂದರು ಅಕ್ಕ.

ಕಚೇರಿಯಲ್ಲಿ ಕೆಲಸ ಮಾಡುವವರೆಲ್ಲರ ಕಾಲುಗಳತ್ತ ಮನಸ್ಸು ಓಡಾಡಿದರೂ ಜ್ಞಾಪಕಕ್ಕೆ ಚಿರಂಜೀವಿ ಬರಲಿಲ್ಲ. ಮುಖಚಹರೆ ದೃಷ್ಟಿಗೆ ನಿಲುಕಲಿಲ್ಲ. ಮಾತು ಮುಂದುವರೆಸಿ 'ಹಾಗಾದ್ರೆ, ಕ್ರಿಕೆಟ್ಟೋ, ಹಾಕಿಯೊ ಅಥವಾ ಫುಟ್ಬಾಲ್ ಟೀಂ ಕಟ್ಟಬಹುದು, ನಿಮ್ಮ ಅಳಿಯನನ್ನೇ ಅಂಪೈರ್ ಮಾಡಿಬಿಡಿ' ಎಂದು ತಮ್ಮನೆಂಬ ಸಲುಗೆಯಿಂದ ಚುಡಾಯಿಸಿದ. ತುಸು